ಇ) ಕಳೆದ ಮೂರು ವರ್ಷಗಳಲ್ಲಿ ಈ ಭಾಗದ ಕೊಳವೆ ಬಾವಿಗಳಿಗೆ ಕಲ್ಪಿಸಿಕೊಟ್ಟಿರುವ ವಿದ್ಯುತ್ ಸಂಪರ್ಕವೆಷ್ಟು, ಫಲಾನುಭವಿಗಳ ವಿವರ ನೀಡುವುದು.

ಶ್ರೀ ಬಸರರಾಜ ಹೆಚ್. ಪಾಟೀಲ್ (ಇಂಧನ ರಾಜ್ಯ ಸಚಿವರು):

ಅ) ಪರಿವರ್ತಕಗಳು ಇಲ್ಲದೆ ಬೆಳೆಗಳು ನಾಶವಾಗಿರುವುದರ ಬಗ್ಗೆ ಯಾವ ರೈತರಿಂದಲೂ ದೂರುಗಳು ಬಂದಿರುವುದಿಲ್ಲ.

ಆ) ಈ ವರ್ಷ ಮಳೆಯ ವೈಫಲ್ಯದಿಂದ ಜಲ ವಿದ್ಯುತ್ತಿನ ಉತ್ಪನ್ನದ ಪ್ರಮಾಣ ಕುಂಠಿತಗೊಂಡಿದ್ದು, ಎಲ್ಲಾ ವಿದ್ಯುತ್ ವಿತರಣಾ ಕೇಂದ್ರಗಳಿಗೂ ವಿದ್ಯುತ್ ಸರಬರಾಜಿನ ಮಿತಿಯನ್ನು ನಿಗದಿಪಡಿಸಲಾಗಿದೆ. ಕೊರಟಗೆರೆ ತಾಲ್ಲೂಕಿನಲ್ಲಿ ಮೂರು ವಿದ್ಯುತ್ ವಿತರಣಾ ಕೇಂದ್ರಗಳಿದ್ದು, ಅವುಗಳ ವಿದ್ಯುತ್ ಸರಬರಾಜಿನ ಮಿತಿ ಈ ಕೆಳಕಂಡಂತೆ ಇದೆ.

1) ಕೊರಟಗೆರೆ 2,34,000 ಯೂನಿಟ್‌ಗಳು
2) ಕೊಳಾಲ 61,900 ಯೂನಿಟ್‌ಗಳು
3) ತೋವಿನಕೆರೆ 1,10,000 ಯೂನಿಟ್‌ಗಳು

ರಾಜ್ಯಾದ್ಯಂತ ವಿದ್ಯುತ್ ಪೂರೈಕೆಯ ಪ್ರಮಾಣವನ್ನು ಹೆಚ್ಚಿಗೆ ಮಾಡಿದಾಗ ಕೊರಟಗೆರೆ ತಾಲ್ಲೂಕಿನಲ್ಲೂ ಸಹ ಅನುಕೂಲ ಮಾಡಿಕೊಡಲಾಗುವುದು.

ಇ) ಈ ಭಾಗದಲ್ಲಿ ವಿವಿಧ ಯೋಜನೆಯಲ್ಲಿ 869 ಕೊಳವೆ ಭಾವಿಗಳಿಗೆ ವಿದ್ಯುತ್ ಸಂಪರ್ಕ ನೀಡಲಾಗಿದೆ.

ರಾಜ್ಯದಲ್ಲಿ ಕೆರೆಗಳ ನಿರ್ಮಾಣ

305 (2578) - ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ (ತಿಕೋಟ) : ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೆರೆಗಳನ್ನು ನಿರ್ಮಿಸಲು ಅವಕಾಶವಿದ್ದು, ನಿರ್ಮಿಸದೇ ಇರುವ ಸ್ಥಳಗಳೆಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಕಳೆದ ಮೂರು ವರ್ಷಗಳಲ್ಲಿದ್ದಂತೆ ರಾಜ್ಯದಲ್ಲಿ ಕೆರೆಗಳ ಸಂಖ್ಯೆ ಎಷ್ಟು ಮತ್ತು ಅವುಗಳ ನೀರಾವರಿ ಕ್ಷೇತ್ರ ಎಷ್ಟು.

ಇ) ಕಳೆದ ಮೂರು ವರ್ಷಗಳಿಂದೀಚೆಗೆ ನಿರ್ಮಿಸಲಾದ ಕೆರಗಳ ಸಂಖ್ಯೆ ಎಷ್ಟು ಹಾಗೂ ಅವುಗಳಿಂದ ಆದ ನೀರಾವರಿ ಕ್ಷೇತ್ರವೆಷ್ಟು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು):

ಅ) ರಾಜ್ಯದಲ್ಲಿ ಹೊಸ ಕೆರೆಗಳನ್ನು ನಿರ್ಮಿಸಲು ಸ್ಥಳೀಯ ಅವಶ್ಯಕತೆ, ತಾಂತ್ರಿಕ ಶಕ್ಯತೆಗೆ ಅನುಗುಣವಾಗಿ ಸ್ಥಳೀಯರ ಮತ್ತು ಚುನಾಯಿತರ ಸದಸ್ಯರ ಕೋರಿಕೆಯ ಮೇರೆಗೆ ಕೆರೆಗಳ ನಿರ್ಮಾಣ ಕಾಮಗಾರಿಯನ್ನು ಅನುದಾನದ ಲಭ್ಯತೆಯನ್ನು ಆಧರಿಸಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತದೆ. ಇಂತಹ 57 ಸ್ಥಳದಲ್ಲಿ ರಾಜ್ಯದಲ್ಲಿ ಹೊಸ ಕಾಮಗಾರಿಗಳನ್ನು ಕೈಗೊಳ್ಳಲು ಗುರುತಿಸಲಾಗಿದೆ. ಗುರುತಿಸಲಾದ ಹೊಸ ಕೆರೆಗಳ ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ತೋರಿಸಲಾಗಿದೆ.

ಆ)

ವರ್ಷ	ಕೆರಪಳ ಸಂಖ್ಯೆ	ನೀರಾವರಿ ಕ್ಷೇತ್ರ ಲಕ್ಷ ಹೆಕ್ಟೇರ್‌ಗಳಲ್ಲಿ
1999-2000 ಅಂತ್ಯಕ್ಕೆ	3317	4.21
2000-2001 ಅಂತ್ಯಕ್ಕೆ	3319	4.22
2001-2002 ಅಂತ್ಯಕ್ಕೆ	3327	4.22

ಇ) ವಿವರಗಳು ಈ ಕೆಳಕಂಡಂತೆ ಇರುತ್ತದೆ.

ವರ್ಷ	ಕೆರೆಗಳ ಸಂಖ್ಯೆ	ನಿರ್ಮಿಸಿದ ನೀರಾವರಿ ಸಾಮರ್ಥ್ಯ ಹೆಕ್ಟೇರುಗಳಲ್ಲಿ
1999-2000	13	2336
2000-2001	22	5268
2001-2002	9	790
ಒಟ್ಟು	44	8394

ಅನುಬಂಧ

ಕ್ರಮ. ಸಂ.	ಜಿಲ್ಲೆ	ತಾಲ್ಲೂಕು	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಅನುದಾನ
1	2	3	4	5	6
			ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ		
1)	ಬೆಳಗಾಂವ	ಗೋಕಾಕ	ಹೊಸೂರ ಗ್ರಾಮದ ಹತ್ತಿರ ಹೊಸ ಕೆರೆ ನಿರ್ಮಾಣ	93.92 98.00	0.50
2)	”	ರಾಯಭಾಗ	ದೇವಾಪುರ ಹಟ್ಟಿ ಹತ್ತಿರ ಹೊಸ ಕೆರೆ ನಿರ್ಮಾಣ	30.00	0.50
3)	”	ಬೈಲಹೊಂಗಲ	ಬೀದಿ ಹತ್ತಿರ ಕೆರೆ ನಿರ್ಮಾಣ	79.05 121.40	0.10
4)	”	”	ಹೆಬ್ಬಾಳ ಹತ್ತಿರ ಕೆರೆ ನಿರ್ಮಾಣ	7.35 117.90	0.10
5)	”	ಹುಕ್ಕೇರಿ	ಬೆಳವಿ ಗ್ರಾಮದ ಹತ್ತಿರ ಹೊಸಕೆರೆ ನಿರ್ಮಾಣ	8.60 45.00	0.10
6)	”	ಹುಕ್ಕೇರಿ	ಬೇಲಾಪುರ ಹತ್ತಿರ ಕೆರೆ ನಿರ್ಮಾಣ	75.01 265.16	0.10
7)	”	ಸವದತ್ತಿ	ದಾಸನಾಳ ಹತ್ತಿರ ಹೊಸಕೆರೆ ನಿರ್ಮಾಣ	27.20	0.10
8)	”	”	ದಾಸನಾಳ ಮಳ್ಳಿಗೇರಿ ಹತ್ತಿರ ಹೊಸ ಕೆರೆ	30.00	0.10

1	2	3	4	5	6
9)	"	ಅಥಣಿ	ಮಧಭಾಂವಿ ಹತ್ತಿರ ಕೆರೆ ನಿರ್ಮಾಣ	35.79 100.13	0.10
10)	"	ಅಥಣಿ	ಯಲ್ಲಮ್ಮನವಾದಿ ಹತ್ತಿರ ಕೆರೆ ನಿರ್ಮಾಣ	71.65 156.07	0.10 0.10
11)	ಬಾಗಲ ಕೋಟೆ	ಬಾದಾಮಿ	ಹಲಗೇರಿ ಹತ್ತಿರ ಹೊಸಕೆರೆ (ಜಿನುಗು) ನಿರ್ಮಾಣ	30.00	0.10
12)	ಗುಲ್ಬರ್ಗಾ	ಅಳಂದ	ತಟಕಲೆ ಕೆರೆ	93.00 130.00	0.40
13)	"	ಸೇಡಂ	ತುಮ್ಮಲಕುಂಟಾ ಕೆರೆ	99.00 125.00	0.10
14)	"	ಯಾದಗೀರ್	ಕಣಕಲ್ ಜಿನುಗು ಕೆರೆ	20.00	0.20
15)	"	"	ಚಿಲೇರಿ ನೊರುಭಾವಿ	20.00	0.20
16)	ಬಾಗಲ ಕೋಟೆ	ಬಾದಾಮಿ	ಫತೀರ ಬೂದಿನಾಳ ಹೊಸ ಕೆರೆ ನಿರ್ಮಾಣ	30.00	0.10
17)	ಬೀದರ್	ಭಾಲ್ಕಿ	ಕಳನದಾಳ ಸೈಟ್-2 ಇಂಗು ಕೆರೆ	30.00	0.10
18)	"	"	ಬೆಂಬ್ರಾ ಕೆರೆ	60.00	7.00
19)	"	"	ಫೋಜಾಳ ಹೊಸ ಕೆರೆ	110.00	15.20
20)	"	ಬಸವಕಲ್ಯಾಣ	ಹಂದ್ರಾಳ ಇಂಗು ಕೆರೆ	30.00	0.10
21)	"	"	ಹಿರನಾಗಾಂವ ಕೆರೆ (ಇಂಗು	30.00	0.10
22)	ಕೊಪ್ಪಳ	ಕೊಪ್ಪಳ	ಘಟರೆಡ್ಡಿಹಾಳ ಕೆರೆ	30.00	0.10
23)	"	ಗಂಗಾವತಿ	ಹುಲಿಹೈದರ ಹತ್ತಿರ ಜಿನುಗು ಕೆರೆ	25.00	0.10
24)	"	ಯಲಬುರ್ಗಾ	ರಾಜೂರು ಜಿನುಗು ಕೆರೆ	30.00	0.10
25)	"	ಯಲಬುರ್ಗಾ	ಹುಣಸಿಹಾಳ ಜಿನುಗು ಕೆರೆ	30.00	0.10
26)	"	ಕುಷ್ಟಗಿ	ಮಣೆದಾಳ ಹತ್ತಿರ ಜಿನುಗು ಕೆರೆ	25.00	0.10
27)	"	ಕುಷ್ಟಗಿ	ಹಿರೇಮನ್ನಾಪೂರ ಹತ್ತಿರ ಜಿನುಗು ಕೆರೆ ನಿರ್ಮಾಣ	20.00	0.20
28)	"	ಕುಷ್ಟಗಿ	ಟಿಗುಂಟಿ ಹತ್ತಿರ ಜಿನುಗು ಕೆರೆ	30.00	0.30
29)	ಬಳ್ಳಾರಿ	ಹರಪನಹಳ್ಳಿ	ಕುಮಾರನಹಳ್ಳಿ ಗ್ರಾಮದ ಹತ್ತಿರ ಹೊಸಕೆರೆ ನಿರ್ಮಾಣ	80.00	0.10
30)	ಬಿಜಾಪುರ	ಬಿಜಾಪುರ	ಮೈಲಾರ ಗ್ರಾಮದ ಬಳಿ ಅರ್ಜನಾಳ ಕೆರೆ ನಿರ್ಮಾಣ	565.00	0.10
31)	ಬಿಜಾಪುರ	ಬಿಜಾಪುರ	ಗುಬ್ಬೇವಾದ ಹತ್ತಿರ ಹೊಸ ಕೆರೆ	20.00	0.10
32)	ರಾಯಚೂರು	ಮಾನ್ವಿ	ಮುದ್ದಾಪೂರ ಕೆರೆ	30.00	0.20

ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು.

ಕ್ರಮ. ಸಂ.	ಜಿಲ್ಲೆ (ಲಕ್ಷ ರೂಗಳಲ್ಲಿ)	ಯೋಜನೆ	ಅಂದಾಜು ಮೊತ್ತ
1)	ಕೋಲಾರ	1) ಎಂ. ಗೊಲ್ಲಹಳ್ಳಿ ಹತ್ತಿರ ಹೊಸಕೆರೆ ನಿರ್ಮಾಣ	60.00
2)	ಚಿತ್ರಾದುರ್ಗ	2) ಮಾವಿನವದ ಜಿನುಗು ಕೆರೆ	20.00
		3) ಪಿಲಾಜಿನಹಳ್ಳಿ ಜಿನುಗುಕೆರೆ	17.75
		4) ಕಣಜಿನಹಳ್ಳಿ ಜಿನುಗುಕೆರೆ	15.00
		5) ಕರಿಯಾಲ ಜಿನುಗು ಕೆರೆ	10.00
		6) ಗಾಂಧಿನಗರ ಜಿನುಗು ಕೆರೆ	15.00
		7) ಜಿನಗೊಂಡನಹಳ್ಳಿ ಜಿನುಗುಕೆರೆ	20.00
		8) ಹೆಚ್.ದಿ. ಪುರ ಇಂಗುಕೆರೆ	10.00
		9) ಚಿಕ್ಕಜಾಜೂರು ಹೊಸಕೆರೆ	5.00
		10) ಕಸಬಾ ಹೋಬಳಿ ಜಿನುಗುಕೆರೆ	10.00
		11) ಮಧುರೆ ಇಂಗುಕೆರೆ	25.00
		12) ವಡೇರಹಳ್ಳಿ ಜಿನುಗು ಕೆರೆ	10.00
		13) ಎನ್.ಆರ್. ಕೊಂಡಾಪುರ ಜಿನುಗುಕೆರೆ	15.00
		14) ಅವಳೇಹಳ್ಳಿ ಜಿನುಗುಕೆರೆ	10.00
		15) ಸೂರೇನಹಳ್ಳಿ ಇಂಗುಕೆರೆ	10.00
		16) ಸಿರಿಗೆರೆ ಹೊಸಕೆರೆ	10.00
		17) ಪಂಡರಹಳ್ಳಿ ಇಂಗುಕೆರೆ	10.00
3)	ದಾವಣಗೆರೆ	18) ಗುಮ್ಮನೂರು ಇಂಗುಕೆರೆ	15.00
4)	ಶಿವಮೊಗ್ಗ	19) ಲಕ್ಕೂರು ಹೊಸಕೆರೆ	20.00
5)	ಹಾಸನ	20) ಕುಡಕುಂದಿ ಹೊಸಕೆರೆ	16.50
6)	ಬೆಂಗಳೂರು (ಗ್ರಾ	21) ತೂಬಿನ ಕೆರೆ ಹೊಸಕೆರೆ	- ಅಂದಾಜು
		22) ಅಲನಾಥ ಬೇರನಹಳ್ಳಿ ಹೊಸಕೆರೆ	- ಷ್ಟಿಯನ್ನು
		23) ಅತ್ತಿಗುಪ್ಪೆ ಬೇರನಹಳ್ಳಿ ಹೊಸಕೆರೆ	- ತಯಾರಿ
		24) ತಟ್ಟಿಕೆರೆ ಬೇರನಹಳ್ಳಿ ಹೊಸಕೆರೆ	- ಸಿಲ್ಲ.
		25) ಕುಮ್ಮೇಗೌಡನ ದೊಡ್ಡಿ ಹೊಸಕೆರೆ	
		ಒಟ್ಟು	324.25

ರಾಜ್ಯದಲ್ಲಿ ವಿದ್ಯುತ್ ಸರಬರಾಜು

307 (2535) - ಶ್ರೀ ಸೋಮಶೇಖರ್ ಬಿ. (ಮಳವಳ್ಳಿ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಶ್ವಬ್ಯಾಂಕ್ ಕರ್ನಾಟಕಕ್ಕೆ ಹೊಸ ವಿದ್ಯುತ್ ಯೋಜನೆಗಳ ಅಗತ್ಯತೆ ಇಲ್ಲ ಎಂದು ಸೂಚಿಸಿರುವುದು ನಿಜವೇ; ರಾಜ್ಯದಲ್ಲಿ ಎಷ್ಟು ವಿದ್ಯುತ್ ಉತ್ಪತ್ತಿಸಲಾಗುತ್ತಿದೆ; ಆಮದು ಎಷ್ಟು; ಬೇಡಿಕೆ ಮತ್ತು ಪೂರೈಕೆ ನಡುವಣ ವ್ಯತ್ಯಾಸ ಎಷ್ಟು.